Reg No B G 155 4—7—72

55th Year of Publication ‡ 'Satyavadi' daily, Mysore 4

In the State - The First
Golden Jubilee
Celebrated Paper
★
News, Views, Dharmic
Moral Ethical Matters



ರಾಜ್ಯದಲ್ಲಿ ಪ್ರಥಮ
ಸ್ವರ್ಣ
ಮಹೋತ್ಸವ
ಸಂದರ್ಭಿಸಿದ
ಪತ್ರಿಕೆ

ಸ್ಥಾಪಕರು: ಅರಮನೆ ಸರಸ್ತೇದಾರ್ ಎಂ.ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಮೈಸೂರು ಪೌರಸಭೆ ಕಾನೂನಿನಲ್ಲಿ ಬದಲಾವಣೆ

ಪರೀಕ್ಷಾ ವಿವಾಹ

ಸಾಂಪ್ರದಾಯಿಕ ವಿವಾಹಗಳು ಪುರಾತನವಾದುದೆಂದ ಹೇಳುವ ಒಬ್ಬ ಏಕದೇವವಾದಿಯು– ಪ್ರೀತಿಸಲು, ಗೌರವಿಸಲು ಮತ್ತು ಗರ್ಭನಿರೋಧ ಆಚರಿಸಲು ಪ್ರತಿಜ್ಞೆ ಮಾಡುವ ದಂಪತಿಗಳಿಗೆ ಒಂದು ವರ್ಷದ ಪಾರಮಾರ್ಥಿಕ ಒಪ್ಪಂದದ ಪರೀಕ್ಷಾ ವಿವಾಹವನ್ನು ಮಾಡಿಸಿರುವರೆಂದು ಹೇಳಿರುವುದಾಗಿ ಎ ಪಿ ವರದಿ.

25 ವರ್ಷದ ರೆವರೆಂಡ್ ಏ ಡ್ರಿ ಯರ್ ಮೆಟಾಲ್– ಪಾರಮಾರ್ಥಿಕ ಒಪ್ಪಿತದ ಒಂದುವರ್ಷದ ಜೊತೆಯ ವಾಸದ ನಂತರ ದಂಪತಿಗಳು ತಮ್ಮ ಭವಿಷ್ಯದ ಸಂಬಂಧವನ್ನು ಚೆನ್ನಾಗಿ ನಿರ್ಧರಿಸಿಕೊಳ್ಳುವರೆಂಬುವುದು ತಮ್ಮ ನಂಬಿಕೆ ಎಂದು ಹೇಳಿದ್ದಾರೆ.

ಇದರಲ್ಲಿ ದಂಪತಿಗಳು ಮಗುವಿನ ಜನನಕ್ಕೆ ಅವಕಾಶ ಕೊಡದೆ 4 ಋತುಗಳ ಕಾಲ ಜೊತೆಯಲ್ಲಿ ವಾಸಿಸಲು ಪ್ರತಿಜ್ಞೆ ಮಾಡುವುದಾಗಿದೆ.

ಉಂಗುರದ ಅದಲುಬದಲಿಲ್ಲ, ಸಮಾರಂಭದಲ್ಲಿ ಗಂಡನಿಗಾಗಲಿ ಹೆಂಡತಿಗಾಗಲಿ ಏನೂ ಸೂಚನೆಗಳಿಲ್ಲ.

ಇದು ಎಲ್ಲೀ ವಿಚಾರದ ಶಕ್ತು ! ಮದುವೆ ವಿಷಯಕ್ಕೆ ಇದು ಬಹು ದೂರವಿದ್ದರೂ, ಮದುವೆ ಮತ್ತು ಧಾರ್ಮಿಕ ಸಮಾರಂಭವೆನ್ನಲಾಗಿದೆ. ಇದು ಸಾಪದಲ್ಲಿನ ಜೀವಿತವಲ್ಲದೆ, ಅದೆಂಥಾ ವಿವಾಹ !

★

49 ಚ. ಸಿಎಂನಲ್ಲಿ 327000 ಅಕ್ಷರಗಳು

ಪಶ್ಚಿಮ ಜರ್ಮನಿಯ ಲುಡ್ವಿಕ್ಸ್‌ಬರ್ಗಿನ ವಿನೋನಿಕಾ ಸೀಡರ್ ಎಂಬುವರು 7 x 7 ಸೆಂಟಿಮಿಟರು ಕಾರ್ಡಿನಲ್ಲಿ 327000 ಅಕ್ಷರಗಳನ್ನು ಮನೋಜ್ಞವಾಗಿ ಬರೆದು ವಿಶ್ವದಾಖಲೆ ಸ್ಥಾಪಿಸಿದ್ದಾರೆ : ಈ ಕೆಯ ಕಣ್ಣುಗಳು ಸಾಮಾನ್ಯ ಜನರ ಕಣ್ಣುಗಳಿಗಿಂತ 20 ರಷ್ಟು ಚುರುಕಾಗಿವೆ.

ಮಂಚದ ಮೇಲೆ ಮಲಗಲಿಲ್ಲವಂತೆ

ಲಾಹೋರು— ತಮ್ಮ 90 ಸಾವಿರ ವೀರ ಭ್ರಾತೃಗಳು ಖೈದಿಗಳಾಗಿ ಭಾರತ ಭೂಮಿಯಲ್ಲಿ ನೆಲದ ಮೇಲೆ ಮಲಗುವುದರಿಂದ, ಸಿಮ್ಲಾದಲ್ಲಿ ತಾವು 5 ದಿನಗಳಿದ್ದಾಗ ಮಂಚದ ಮೇಲೆ ಮಲಗಲಿಲ್ಲವೆಂದು ಅಧ್ಯಕ್ಷ ಭುಟ್ಟೊ ಇಲ್ಲಿಯ ವಿಮಾನ ನಿಲ್ದಾಣದಲ್ಲಿ ಸೇರಿದ್ದ ಗುಂಪಿಗೆ ತಿಳಿಸಿದರು.

●

ರೈತರ ಅನುಕೂಲಕ್ಕೆ

ನಂಜನಗೂಡು— ರೈತರು ಹೊಸ ರೀತಿಯ ವ್ಯವಸಾಯ ಮಾರ್ಗ ಅನುಸರಿಸಲು ಅನುಕೂಲಿಸುವಂತೆ ರಾಜ್ಯ ಸರಕಾರ ಮತ್ತು ವಿಶ್ವ ಬ್ಯಾಂಕು ರೂ. 50 ಕೋಟಿ ಮಂಜೂರ್ಮಾಡಿರುತ್ತವೆಂದೂ ಹುಲ್ಲಹಳ್ಳಿಯಲ್ಲಿ ಜಿಲ್ಲಾ ಸಹಕಾರ ಸಂಘದ 13 ನೇ ಶಾಖೆ ಉದ್ಘಾಟಿಸುತ್ತಾ, ಸಹಕಾರ ಮಂತ್ರಿ ಶ್ರೀ ಶಂಕರ ಅಳ್ವಾರವರು ಹೇಳಿದರು

★

ಯಾತ್ರಿಕರ ನೆಲೆ

ಮೈಸೂರು— ಕಂದಾಯ ಮಂತ್ರಿ ಹುಚ್ಚಮಾಸ್ತಿಗೌಡರು, ಮಹದೇಶ್ವರ ಬೆಟ್ಟಗಳಲ್ಲಿ ರೂ. 70000 ಖರ್ಚಿನಲ್ಲಿ ಕಟ್ಟಿರುವ ಯಾತ್ರಿಕರ ನೆಲೆಯನ್ನು ಉದ್ಘಾಟಿಸಿದರು – ಅಲ್ಲಿಗೆ ಟೆಲಿಫೋನು ಸೌಕರ್ಯ ಬದಗಿಸಲು ಭರವಸೆ ಇತ್ತರು.

★

ಮನೆ ನಿವೇಶನಗಳು

ತುಮಕೂರು— 4 ಲಕ್ಷ ನಿವೇಶನಗಳನ್ನು ಮನೆಯಿಲ್ಲದ ಸಂಸಾರಗಳಿಗೆ ಅರ್ಧ ಬೆಲೆಗೆ ಮತ್ತು ಬಡವರಿಗೆ ಉಚಿತವಾಗಿ ಹಂಚಲಾಗುವುದೆಂದು ಕಂದಾಯ ಮಂತ್ರಿ ಶ್ರೀ ಹುಚ್ಚಮಾಸ್ತಿಗೌಡರು ಸಿರಾದಲ್ಲಿ ತಿಳಿಸಿದರು – ಭೂ ಸುಧಾರಣೆ ನಂತರ ಹಂಚಲು 4 ಲಕ್ಷ ಎಕ್ರೆ ಭೂಮಿ ಸಿಕ್ಕುವುದೆಂದೂ ಹೇಳಿದರು.

ಬಂಗ್ಲಾ ದೇಶಕ್ಕೆ ಮನ್ನಣೆ

ಸಿಮ್ಲಾ— ಪಾಕಿಸ್ತಾನವು ಬಂಗ್ಲಾ ದೇಶಕ್ಕೆ ಆಗಸ್ಟ್‌ನಲ್ಲಿ ಮನ್ನಣೆ ಕೊಡುವ ಸಂಭವವಿರುವದೆಂದು ಪಾಕಿಸ್ತಾನಿ ವಕ್ತಾರರೊಬ್ಬರು ಹೇಳಿದರು.

ಮುನಿಸಿಪಲ್ ಶಾಸನದಲ್ಲಿ ಬದಲಾವಣೆ

ತರೀಕೆರೆ— ಈಗಿನ ಮುನಿಸಿಪಲ್ ಶಾಸನವು ಇಂದಿನ ಪ್ರಜಾರಾಜ್ಯಕ್ಕೆ ಅನುಸರಣೀಯವಾಗಿಲ್ಲವಾಗಿ ಸೂಕ್ತ ಬದಲಾವಣೆ ಅವಶ್ಯಕವೆಂದು ಪೌಂಡಳಿತ ಮಂತ್ರಿ ಶ್ರೀ ಬಸವಲಿಂಗಪ್ಪನವರು ರೂ. 13 ಲಕ್ಷದ ಖರ್ಚಿನ ಭದ್ರಾ ನಾಲಾ ನೀರು ಸರಬರಾಜಿನ ಸ್ಕೀಮನ್ನು ಉದ್ಘಾಟಿಸುತ್ತಾ ಹೇಳಿದರು.

ಪಾಕಿಸ್ತಾನಿಗಳ ಸಂತೋಷ

ನವದೆಹಲಿ— ಲಾಹೋರಿನಲ್ಲಿ ಭುಟ್ಟೊ ರವರು, ಇಳಿದೊಡನೆ, ರೋಮ್ ಪದ್ಧತಿಯಂತೆ, ಉನ್ನತ ಸಭೆಯ ಒಪ್ಪಂದದ ವಿಷಯಲ್ಲಿ ತಮ್ಮ ಜನರ ಅಭಿಪ್ರಾಯ ಕೇಳಿದಾಗ, ಅದು ನಮಗೆ ಸುಖಸಂತೋಷ ಉಂಟುಮಾಡಿದೆ ಎಂದು ಹೇಳಿದರು.

ಮೈಸೂರಿನ ಆನೆಮರಿಗಳು

ನವದೆಹಲಿ— ಅಮೇರಿಕಾದ ಸಾಂಟಾ ಬಾರ್ಬರಾ ನಗರದ ಮಕ್ಕಳ ಪಾರ್ಕಿಗೆ ಮೈಸೂರು ಸರಕಾರ ಉದಾರ ದಾನಾ ಮಾಡಿರುವ 2 ಆನೆಮರಿಗಳು ವಿಮಾನದಲ್ಲಿ ಹೊರಟವು.

ವಿವಾಹಮಹೋತ್ಸವ

ಚಿ॥ ಸೌ॥ ನರ್ಮದ (ಒಲಂಪಿಯಾ ಟ್ರಾಕೀಸ್ ಮ್ಯಾನೇಜರ್ ಶ್ರೀ ಬಿ ಶೇಷಗಿರಿರಾವರ ಪುತ್ರಿ) ಚಿ॥ ರಾ॥ ಬಿ. ಆರ್ ಸುಧೀಂದ್ರನಾಥ್ ಕಶ್ಯಪ್ (ಕೋಲಾರ ಸರ್ಕಾರಿ ಕಾಲೇಜ್‌ನ ಶ್ರೀ ಬಿ ಎಲ್. ರಘುರಾಂರ ಪುತ್ರ–) ಇವರ ವಿವಾಹ 2ನೇ ತಾ॥ ಮೈಸೂರಿನಲ್ಲಿ ವೈಭವದಿಂದ ನೆರವೇರಿತು.

ಉನ್ನತ ಸಮ್ಮೇಳನ

ಸಿಮ್ಲಾ— ಪ್ರಧಾನಿ ಇಂದಿರಾ ಅಧ್ಯಕ್ಷ ಭುಟ್ಟೋರವಳಲ್ಲಿ ಆದ ಒಪ್ಪಂದದಂತೆ, ಜಮ್ಮು ಕಾಶ್ಮೀರ ಬಿಟ್ಟು ಮಿಕ್ಕ ಸ್ಥಳಗಳಲ್ಲಿ ಎರಡು ದೇಶದ ಸೇನೆಗಳನ್ನು ಅಂತರ್ರಾಷ್ಟ್ರೀಯ ಗಡಿಗೆ ವಾಪಸ್ಸಾಗುವವು – ಅಂದರೆ ಭಾರತವು ಪಂಜಾಬ್, ಕಚ್, ಸಿಂಧ್‌ನಲ್ಲಿ ಕಳೆದುಯುದ್ಧದಲ್ಲಿ ಆಕ್ರಮಿಸಿದ 5139 ಚದುರ ಮೈಲಿ ಪಾಕಿಸ್ತಾನ ಪ್ರದೇಶಗಳಿಂದ ವಾಪಸ್ಸಾಗುವುದು ; ಪಾಕಿಸ್ತಾನವು ಆಕ್ರಮಿಸಿದ್ದ ಪಂಜಾಬು ಮತ್ತು ರಾಜಸ್ಥಾನದ ಗಂಗಾನಗರದಲ್ಲಿಯ ಕೇವಲ 69 ಚದುರ ಮೈಲಿಗಳಷ್ಟು ಸ್ಥಳವನ್ನು ಭಾರತ ಪಡೆಯುವುದು – ಸಧ್ಯಃ ಉನ್ನತ ಸಮ್ಮೇಳನದ ಫಲವಿದು – ಮಿಕ್ಕ ವಿಚಾರಗಳೂ ಉಭಯತ್ರರಲ್ಲೀ ಶಾಂತಿಯುತವಾಗಿ ಪರಿಹರಿಸಿಕೊಳ್ಳುವ ನಿರ್ಧಾರವಾಗಿದೆ – ಅಂಚೆತಂತಿ ವಿಮಾನ ಹಾರಾಟ, ವ್ಯಾಪಾರ ಹಿಂದಿನಂತೆ ಜಾರಿಗೆ ಬರುವುದು – ಮುಂದಿನ ಉನ್ನತ ಸಭೆ ಸೆಪ್ಟಂಬರಿನಲ್ಲಿ ನಡೆಯುವುದು.

★

ಜಾಕ್‌ಪಾಟ್

ಬೆಂಗಳೂರು— ಭಾನುವಾರದಂದೇ ಸ್ಟೇಟ್‌ನಲ್ಲಿ ಜಾಕ್‌ಪಾಟ್‌ನಲ್ಲಿ ವಿಜಯಗೊಂಡ ಒಂದು ಟಿಕೇಟಿನ ರೂ 469226 ಮೋಟಾರು ಕೈಗಾರಿಕೆಯ ಆಪರೇಟರು ಶ್ರೀ ಪುಟ್ಟಸ್ವಾಮಿಗೌಡರಿಗೆ ದೊರೆಯಿತು.

★

● ಕಡವ— ತಮ್ಮ ವಿವಿಧ ಕೇಳಿಕೆ ನೆರವೇರಿಸಿಕೊಳ್ಳಲು ಆಂಧ್ರ ಪ್ರದೇಶದ ವಿದ್ಯುತ್ ಇಲಾಖೆಯ 3ರಷ್ಟುಮಂದಿ ಆಫೀಸಿನ ಮುಂದೆ ಸಾಮೂಹಿಕ ಅನ್ನಸತ್ಯಾಗ್ರಹ ಪ್ರಾರಂಭಿಸಿರುವರು

★ ಕೇರಳದಲ್ಲಿ ಸರಕಾರ ಖಾಸಗಿ ಕಾಲ್ತೇಜುಗಳನ್ನು ವಹಿಸಿಕೊಳ್ಳುವ ಯೋಜನೆ ಪ್ರತಿಭಟಿಸಿ 1 ಲಕ್ಷಮಂದಿ ತ್ರಿಚೂರಿನಲ್ಲಿ ಮೆರವಣಿಗೆ ನಡೆಸಿದರು.

ನೆಕ್ಸಲೈಟ್ ಖೈದಿಗಳು

ವಿಶಾಖಪಟ್ಟಣ – ಸ್ಪೆಷಲ್ ಮ್ಯಾಜಿಸ್ಟ್ರೇಟ್ ಕೋರ್ಟ್‌ನಲ್ಲಿ ಮಂಗಳವಾರ ಪಾರ್ವತೀಪುರದ ನೆಕ್ಸಲೈಟರ ಪಿತೂರಿ ಮೊಖದ್ದಮೆ ವಿಚಾರಣೆಗೆ ಬಂದಾಗ 6 ಮಂದಿ ಆಪರಾಧಿಗಳು ರಾಜಕೀಯ ಘೋಷಣೆ ಕೂಗುತ್ತಾ, ಕ್ರಾಂತಿ ಹಾಡುಗಳನ್ನು ಹಾಡಿದರು.

ಚಿನ್ನಾಭರಣ ವಶ

ಮಧ್ಯಾಹ್ನದಲ್ಲಿ ಒಬ್ಬ ಮಾರ್ವಾಡಿಯ ಅಂಗಡಿಯಿಂದ ಆ ಬ್ಯಾಂಕಿ ಅಧಿಕಾರಿಗಳು ರೂ 40000 ಬೆಲೆಯ ಚಿನ್ನಾಭರಣಗಳನ್ನು ವಶಪಡಿಸಿಕೊಂಡರು – ಆಕ್ರಮ ಸಾಗಾಣಿಕೆಯ ಇವುಗಳನ್ನು ಒಣಪುಲ್ಲು ರಾಶಿಯಲ್ಲಿ ಮುಚ್ಚಿಡಲಾಗಿತ್ತು.

● ಹಾಂಕಾಂಗ್— ಲಂಕಾ ಪ್ರಧಾನಿ ಸಿರಿಮಾವೋರವರ, ಹಿಂದೂಸಾಗರವನ್ನು ಶಾಂತಿ ವಲಯವಾಗಿ ಘೋಷಿಸಬೇಕೆಂದ ಯೋಜನೆಗೆ ಚೀನಾ ಪ್ರಧಾನಿ ಚೌಎನ್‌ಲೈ ಬೆಂಬಲ ನೀಡುವುದಾಗಿ ಭರವಸೆಕೊಟ್ಟಿದಾರೆ

ಪ್ರತಿಷ್ಠಾಪನೆ

ತುಮಕೂರಿನಿಂದ ಬಂದಿರುವ ವರದಿ ಪ್ರಕಾರ, ಅಮ್ಮ ಸಮುದ್ರದಲ್ಲಿ ಮೈಸೂರು ಸೀಮೆಂಟ್‌ನವರು ನಿರ್ಮಿಸಿರುವ ಹೊಸದಾದ ದೇವಾಲಯದಲ್ಲಿ ಶ್ರೀ ಬಾಲಾಜಿ ವಿಗ್ರಹ ಪ್ರತಿಷ್ಠೆ ಮಾಡಲಾಯಿತು.

ಬಾಂಬು ನಿಲ್ಲುವುದಿಲ್ಲ

ಅಮೆರಿಕಾ ಅಧ್ಯಕ್ಷ ನಿಕ್ಸನ್ ವಾಷಿಂಗ್ಟನ್‌ನಲ್ಲಿ ಮಾತನಾಡುತ್ತಾ, ವಿಯಟ್ನಾಂ ಶಾಂತಿ ಮಾತುಕತೆಗೆ ಅನೋರಿಕಾ ಹೋಗುವುದೆಂದೂ ಆದರೆ ಬಾಂಬು ಹಾಕುವುದು ಮುಂದುವರಿಯುತ್ತಿರುವುದೆಂದೂ ಪ್ರಕಟಿಸಿರುವರು.

ಆಸ್ತಿ ವಿತಿ ಮಸೂದೆ

ನಗರ ಪಟ್ಟಣಗಳ ಆಸ್ತಿ ವಿತಿ ಮಸೂದೆಯನ್ನು ಈ ವರ್ಷದ ಕಡೆಯಲ್ಲಿ ತರುವ ಸಂಭವ ಇನೆ ಎಂದು ವಿಧಾನ ಪರಿಷತ್ತಿನಲ್ಲಿ ಮುಖ್ಯ ಮಂತ್ರಿ ಶ್ರೀ ಡಿ. ದೇವರಾಜ ಅರಸ್ ರವರು ತಿಳಿಸಿದರು.

ಮಾನವನು ಕೀಳು ಸೃಷ್ಟಿಯ ಧಣಿ, ಶ್ರಿಷ್ಠನೆನ್ನುವುದು ಸೊಕ್ಕಿನ ಕಲ್ಪನೆ
ಬದುಕಿಗೆ ಮಹತ್ ಶಕ್ತಿ ಕೊಡಲ್ಪಟ್ಟ ಅವನು ಮೃಗಸಾಮ್ರಾಜ್ಯದ ಧರ್ಮಕರ್ತ
— ಮಹಾತ್ಮಾ ಗಾಂಧಿ

ಈ-ಸಂದೇಶ ಹೊತ್ತ ಚಿತ್ರ ಸಂದೇಶ್ ಕವರ ಜೊಚ್ಚಲು ಚಿತ್ರ

ಆ ನೆ - ಹು ಡು ಗ

SHAKTI

SUDHA

A Superb Tonic

ಅಖಿಲ ಭಾರತದಲ್ಲಿ ಕೂಡಲೇ

ಗೋವಧೆ ನಿಷೇಧವಾಗಲಿ

ವುಡ್‌ಲ್ಯಾಂಡ್ಸ್ 30-6-72ರಿಂದ ಆಮೋಘ 9 ನೇ ವಾರ

.... ಚಿತ್ತಾಕರ್ಷ ಕನ್ನಡ ಚಿತ್ರ ....

ಹೃದಯ ಸಂಗಮ

ನಟಸಾರ್ವಭೌಮ ರಾಜಕುಮಾರ್, ಭಾರತಿ, ಬಾಲಕೃಷ್ಣ, ಅಶ್ವತ್, ಪಂಡರಿಬಾಯಿ
ನಿರ್ದೇಶನ: ರಾಶಿ ಸಹೋದರರು ನಿರ್ಮಾಪಕರು: ಎಂ ಜಿ ಎಂ ಸಹೋದರರು

ಪ್ರತಿ ದಿನ 3 ಪ್ರದರ್ಶನಗಳು

ಬೆಳಗಿನ ಪ್ರದರ್ಶನ ಪ್ರತಿ ದಿನ 10-30 ಮೊದಲಚಿತ್ರ

ಅಪೆರಾ 30 6 72 ರಿಂದ

ಜೆಮಿನಿಯವರ ಮಹೋನ್ನತ ತೆಲುಗು ವರ್ಣ ಚಿತ್ರ

ಕಲೆಕ್ಟರ್ ಜಾನಕಿ

ಪಾತ್ರ — ಜಮುನ, ಜಯಂತಿ, ರಮಾಪ್ರಭ, ನಿರ್ಮಲ, ಚಂದ್ರಿಕ, ಜಗ್ಗಯ್ಯ

ದಿನ 3 ಪ್ರದರ್ಶನಗಳು

Contribute Liberally
to the National Defence Fund



Help The Gorakshana

— Humanitarian Propoganda Monthly ....

Edited Printedand Published by Dharmapracharanirata
M S Krishna Rao (Propretor) at the Satvevadi Press
Chamarajapuram Mysore 4

Bank Road Bahusar A Fair Price Shop in Actual Practice